1	2	3	4	5	6
4.	2001-02	ವಿರೂಪಾಪುರ ಹೆಬ್ಬಳಲು ಹಳ್ಳಿ ರಸ್ತೆ	79.000	14.25	ಜಲ್ಲಿ ಕೆಲಸ ಪ್ರಗತಿಯಲ್ಲಿದೆ.
5.	2001-02	ಮಾಲತ ಅಂಚಿಕುಪ್ಪೆ ಹಳ್ಳಿ ರಸ್ತೆ	56.65	0.24	ಜಲ್ಲಿ ಸಂಗ್ರಹಣೆ ಪ್ರಗತಿಯಲ್ಲಿದೆ.
6.	2001-02	ಹೆಬ್ಬಳಲು ಸಂಕೀಘಟ್ಟ ಹಳ್ಳಿ ರಸ್ತೆ	60.00	-	ರಸ್ತೆ ಏರಿ ಕಾಮಗಾರಿ ಪ್ರಗತಿಯಲ್ಲಿದೆ.

4. ಈ ಯಾವ ಕಾಮಗಾರಿಗಳೂ ಕಳಪೆ ಗುಣಮಟ್ಟದ್ದಾಗಿರುವುದಿಲ್ಲ, ಆದರೆ 97-98ರ ಆರ್‌ಐಡಿಎಫ್-3ರಡಿ ಕೈಗೊಳ್ಳಲಾದ ಬೆಳಗುಂಬ ತಗಚಿಕುಪ್ಪೆ ರಸ್ತೆ ಕಾಮಗಾರಿಯ ಸರಪಳಿ 1.70 ಕಿಮೀನಿಂದ 2.00 ಕಿಮೀವರೆಗೆ ಕಳಪೆ ಗುಣಮಟ್ಟದ ಬಗ್ಗೆ ನೆಲಮಂಗಲ ಕ್ಷೇತ್ರದ ಶಾಸಕರು ದಿನಾಂಕ 10-6-2000ದಲ್ಲಿ ಸರ್ಕಾರಕ್ಕೆ ದೂರು ನೀಡಿದ್ದು, ಇದರಂತೆ ಕಾಮಗಾರಿಯಲ್ಲಿನ ನ್ಯೂನತೆಯನ್ನು ಕೂಡಲೇ ವಿಶ್ಲೇಷಿಸಿ ಪರಿಹಾರ ಸೂಚಿಸುವಂತೆ ಗುಣನಿಯಂತ್ರಣ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಗೆ ಸೂಚಿಸಲಾಗಿತ್ತು, ಇದರಂತೆ ಗುತ್ತಿಗೆದಾರರು ನ್ಯೂನತೆಯನ್ನು ತೃಪ್ತಿಕರವಾಗಿ ಸರಿಪಡಿಸಿರುತ್ತಾರೆ.

ಮಾಗಡಿ ಕ್ಷೇತ್ರದಲ್ಲಿ ಅಕ್ರಮ ಸಾಗುವಳಿ ಸಕ್ರಮಗೊಳಿಸುವುದು

198(607) ಶ್ರೀ ಚನ್ನಿಗಪ್ಪ ಸಿ (ಕೊರಟಗೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ರೈತರಿಗೆ ಅಕ್ರಮ ಸಾಗುವಳಿ ಸಕ್ರಮಗೊಳಿಸಲಾಗಿದೆ. ಎಷ್ಟು ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ?

ಆ) ಅಕ್ರಮ ಸಕ್ರಮ ಸಮಿತಿಗೆ ಬಂದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು? ಇತ್ಯರ್ಥವಾಗಿದೇ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು (ವಿವರ ನೀಡುವುದು)?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ. ಆರು ಜನ ರೈತರಿಗೆ 7.22 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ.

ಆ)

	ನಮೂನೆ 50	ನಮೂನೆ. 53
ಸ್ವೀಕರಿಸಲಾದ ಒಟ್ಟು ಅರ್ಜಿಗಳ ಸಂಖ್ಯೆ	7614	6421
ಇತ್ಯರ್ಥವಾಗದೆ ಉಳಿದ ಅರ್ಜಿಗಳ ಸಂಖ್ಯೆ	28	5833

ವಿವರ ಈ ಕೆಳಕಂಡಂತಿದೆ

	ನಮೂನೆ. 50	ನಮೂನೆ. 53
ಸ್ವೀಕರಿಸಲಾದ ಒಟ್ಟು ಅರ್ಜಿಗಳು	7614	6421
ಮಂಜೂರಾದ ಅರ್ಜಿಗಳ ಸಂಖ್ಯೆ	4443	06
ತಿರಸ್ಕೃತವಾದ ಅರ್ಜಿಗಳ ಸಂಖ್ಯೆ	3143	582
ಬಾಕಿ	28	5833

ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಅರಣ್ಯ ಅಭಿವೃದ್ಧಿ ಕಾಮಗಾರಿಗಳು

199(608) ಶ್ರೀ ಚನ್ನಿಗಪ್ಪ ಸಿ (ಕೊರಟಗೆರೆ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಮೂರು ವರ್ಷದಲ್ಲಿ ಡಿಡಿಎಫ್, ಎಒಎಫ್ಎಫ್, ಆರ್ಎಸ್ಪಿಸಿ, ಜಿವಿಎ, ಕೆಎಫ್ಡಿಎಫ್, ಒಇಸಿಎಫ್, ಕಾಂಪೆನ್ಸೆಟರಿ ಮುಂತಾದ ಯೋಜನೆಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮಂಜೂರಾದ ಹಣ ಎಷ್ಟು? ಎಷ್ಟು ಹಣ ಖರ್ಚು ಮಾಡಲಾಗಿದೆ;

ಆ) ಯಾವ ಕಾರ್ಯಕ್ರಮ, ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ, ಪ್ರತಿ ಕಾರ್ಯಕ್ರಮವಾರು ಮಾಹಿತಿ ನೀಡುವುದು, ಈ ಕಾರ್ಯಕ್ರಮ ಕಾಮಗಾರಿಗಳು ಯಾರ ಹಂತದಲ್ಲಿವೆ?

ಶ್ರೀ ಕೆ.ಎಚ್. ರಂಗನಾಥ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ)

ವರ್ಷ	ಯೋಜನೆಯ ಹೆಸರು	ಮಂಜೂರಾದ ಹಣ (ರೂ. ಲಕ್ಷಗಳಲ್ಲಿ)	ಖರ್ಚಾದ ಹಣ (ರೂ. ಲಕ್ಷಗಳಲ್ಲಿ)
1999-2000	ಡಿಡಿಎಫ್	-	-
	ಎಒಎಫ್ಎಫ್	1,154	1,154
	ಆರ್ಎಸ್ ಪಿ	-	-
	ಜಿವಿಎ	-	-
	ಕೆಎಫ್ಡಿಎಫ್	7,345	7,345
	ಒಇಸಿಎಫ್	71,457	63,425
	ಕಾಂಪೆನ್ಸೆಟರಿ	-	-